ಮೂರು... ವಾರಗಳು ಪುಣ್ಯಕೋಟಿಗೆ ವರ್ಷದಂತೆ ಕಳೆದವು. ನಾನು ಅವನ ಸ್ವ–ಹತ್ಯೆಯನ್ನು ತಡೆಯುವ ಅವಕಾಶ ಇತ್ತು. ನಾನು ತಡೆಯದೆ ಸ್ವಾರ್ಥಿಯಾದೆ, ಪರೋಕ್ಷ ಕೊಲೆಗೆ ಕಾರಣಳಾದೆ ಎನಿಸಿ ತೀವ್ರವಾಗಿ ನೊಂದಳು. ಹುಲಿಯಂತೆ ಅವಳೂ ಆಹಾರವ ಬಿಟ್ಟಳು. ಪುಣ್ಯಕೋಟಿಗಾಗಿ ಹುಲಿ, ಹುಲಿಗಾಗಿ ಪುಣ್ಯಕೋಟಿ ಪರಸ್ಪರ ಜೀವತೆತ್ತವು. ಗೊಲ್ಲ ವಿಧವಿಧವಾಗಿ ರೋದಿಸಿ, ರೂಢಿಯಂತೆ ಎಲ್ಲವ ಮುಗಿಸಿದ. ಪುಣ್ಯಕೋಟಿಯ ಮಗಳು ಎಲ್ಲರ ಪ್ರೀತಿ ಪಡೆದು ತಾಯಿಯ ಮೀರಿಸುವ ಹೃದಯಕಾರುಣ್ಯ ತುಂಬಿ ತ್ವರಿತವಾಗಿ ಬೆಳೆಯುತ್ತಾ ನಲಿಯುತ್ತಿದ್ದಳು.

ಈ ನಡುವೆ ಯಥಾಪ್ರಕಾರ ಕಾಳಿಂಗ ಗೋಪಾಲನ ಮಗ ಮಾಲಿಂಗ ಗೋಪಾಲ ಕಾಡಿಗೆ ತರುಗಳನ್ನು ಹೊಡೆದು ನೆಳಲೊಡ್ಡಿ ನಿಂತ ಮಾಮರದಡಿ ನಿದ್ದೆಗೆ ಜಾರಿದ್ದ. ಪುಣ್ಯಕೋಟಿಯ ಮಗಳ ನೋಟಕ್ಕೆ ಯಾವುದೋ ಹುಲಿಯೊಂದು ದೂರದಿ ಗುಂಪಿನ ಮೇಲೆ ಎರಗಲು ಹೊಂಚು ಹಾಕುತ್ತಿರುವಂತೆ ಕಂಡಿತು. ಆಕೆಗೆ ಪುಣ್ಯಕೋಟಿಯು ಕನವರಿಸುತ್ತಿದ್ದ ಮಾತುಗಳು ನೆನಪಾದವು. ನಾನು ಪಾಪಿ, ಪರರ ಆಹಾರವ ಕಿತ್ತುಬಿಟ್ಟೆ, ಅರ್ಬುದನ ಕೊಂದುಬಿಟ್ಟೆ ಎಂಬ ತಾಯಿಯ ಕನವರಿಕೆಗಳು ಆಕೆಯನ್ನು ಆವರಿಸಿದವು. ಸಾತ್ವಿಕ ಗುಣಗಳೇ ಮೈ ತುಂಬಿದ್ದ ಪುಣ್ಯಕೋಟಿಯ ಮಗಳಿಗೆ ಈ ಹುಲಿ ಇನ್ನೇನು ಗುಂಪಿನ ಗೋವುಗಳ ಮೇಲೆ ದಾಳಿ ಇಟ್ಟು ನನ್ನವರನ್ನು ಕೊಲ್ಲುತ್ತದೆ ಎಂದು ಖಾತರಿಯಾಯಿತು. ಅವಳು ದಿಟ್ಟ ತೀರ್ಮಾನ ಮಾಡಿದಳು, ಥೇಟ್ ಅವಳ ತಾಯಂತೆ. ನಡೆದಳು... ನಡೆದಳು... ಹುಲಿಯೆದುರೇ ನಿಂತಳು!

ಹುಲಿಗೆ ಈಗ ನಿಜಕ್ಕೂ ಭಯವಾಯಿತು. 'ಯಾರು ನೀನು? ಕಾಮಧೇನುವೋ, ಸುರಭಿಯೋ, ನಿನ್ನ ಬಲದಿಂದ ನನ್ನ ಚರ್ಮ ಸುಲಿಸಲು ಬಂದೆಯಾ?'.

'ನಾನ್ಯಾರಾದರೇನು? ನಿನಗೆ ಬೇಕಿರುವುದು ಮಾಂಸವಲ್ಲವೆ... ಇಗೋ ಬಂದಿದ್ದೇನೆ, ಸ್ವೀಕರಿಸು.'

'ಇಲ್ಲ, ಇಲ್ಲ, ನೀನ್ಯಾರೋ ಅಂದದ ಮಾಟಗಾತಿ ಗೋವು, ನನ್ನ ತಂದೆ ಅರ್ಬುದನನ್ನು ಕೊನೆಗಾಣಿಸಿದ್ದು ನಿನ್ನಂತದೇ...!'

'ಏನಂದೆ? ಅರ್ಬುದನೇ?'

'ಹೌದು, ಅವನೇ ನನ್ನ ತಂದೆ. ತಾಯಿ ಇಲ್ಲದ ಮಕ್ಕಳಿಗೆ ಬೇಟೆ ಕಲಿಸುವ ಮುನ್ನವೇ ಸತ್ತ ತಂದೆ. ಮಾಂಸ ತರುವೆನೆಂದು ಸುಳ್ಳುಹೇಳಿ ಆತ್ಮಹತ್ಯೆ ಮಾಡಿಕೊಂಡ ಪಾಪಿ ತಂದೆ.'

'ಶಿವ ಶಿವಾ... ನಿಲ್ಲಿಸು.'

ಪುಣ್ಯಕೋಟಿಯ ಮಗಳಿಗೆ ತಾಯಿಯ ಪ್ರೀತಿಯನ್ನು ಮತ್ತಷ್ಟು ದಿನ ಉಳಿಸಿಕೊಟ್ಟ ಮಹಾತ್ಯಾಗಿ ಅರ್ಬುದನ ಮಗ ಈತನೇ ಎಂಬ ಅರಿವಾಗುತ್ತದೆ. ತನ್ನ ತಾಯಿ ಪುಣ್ಯಕೋಟಿಗೆ ಸಾಯುವ ದಿನಗಳಲ್ಲಿ ಇದ್ದ ಕೊರಗು ನೀಗಿಸುವ ಇಚ್ಛೆ ಮತ್ತಷ್ಟು ಹೆಚ್ಚುತ್ತದೆ. ತಾಯಿಯನ್ನು ನನಗೆ ಮರಳಿಸಿದ್ದ ಅರ್ಬುದನ ಮೇಲಿದ್ದ ಗೌರವಕ್ಕೆ ಪುಣ್ಯಕೋಟಿಯ ಮಗಳು ಕೃತಜ್ಞತಾ ಭಾವದಿಂದ ಹುಲಿಗೆ ಶಿರಬಾಗಿ ವಂದಿಸಿ ಕಾಲೂರಿ ಕೂರುತ್ತಾಳೆ.

ಹುಲಿ ಅವಳನ್ನು ಎರಡು ಸುತ್ತು ಹಾಕುತ್ತದೆ. ಪುಣ್ಯಕೋಟಿಯ ಮಗಳು ತಲೆ ಎತ್ತಿ 'ಅಮ್ಮಾ... ನೀನು ಅಂದು ಮೂರು ಹುಲಿಗಳ ಹೊಟ್ಟೆಯ ಹಸಿವ ಕಿತ್ತೆ, ಒಂದು ಹುಲಿಯ ಪ್ರಾಣವ ಕಿತ್ತೆ ಎಂದು ನಿತ್ಯ ರೋದಿಸಿ ಉಪವಾಸವಾಚರಿಸಿ ಸಾವಿಗೆ ಹೋದೆ. ಇದೋ ನಿನ್ನ ಕೊರಗಿಗೆ ತಿಲಾಂಜಲಿ.'

ಹುಲಿ ಗೋವನ್ನು ದಿಟ್ಟಿಸುತ್ತದೆ. ಮಕ್ಕಳ ಹಸಿವು ನೀಗಿಸದೆ ಸ್ವರ್ಗಕ್ಕೆ ಹೋದ ತಂದೆಯೇ... ನಾನೇನು ಮಾಡಲಿ ಇವಳೂ ನಿನ್ನಂತೆಯೆ ಸಾವಿಗೆ ಆಹ್ವಾನವೀಯುತ್ತಿದ್ದಾಳೆ. ಪರರ ಪ್ರಾಣ ಉಳಿಸಲು ತನ್ನ ಪ್ರಾಣವನ್ನೇ ಕೊಡಲು ಬಂದಿರುವ ಪುಣ್ಯಮೂರ್ತಿಯನ್ನು ನಾನು ಹೇಗೆ ಕೊಲ್ಲಲಿ? ಅಥವಾ ನಿನ್ನ ದಾರಿಯಲ್ಲಿಯೇ ನಾನೂ...

ಹುಲಿಯು ಗೋವಿನ ಮುಂದೆ ಮಂಡಿಯೂರುತ್ತದೆ.

'ಮಹಾತಾಯಿ, ನಾನು ಬಾಲ್ಯದಲ್ಲಿದ್ದಾಗ ಪುಣ್ಯಕೋಟಿ ಎಂಬ ಗೋವೊಂದನ್ನು ಕಂಡಿದ್ದೆ. ಆಕೆ ತನ್ನ ಕಂದನಿಗೆ ಮೊಲೆಕೊಟ್ಟು ಬರುತ್ತೇನೆಂದು ಕೊಲ್ಲಲು ಬಂದ ನನ್ನ ತಂದೆಗೆ ವಚನವಿತ್ತು ಅದೇ ರೀತಿ ನಡೆದಳು. ಸದ್ಗುಣ ಸಂಪನ್ನನಾದ ನನ್ನ ತಂದೆಯು ನಿನ್ನಂಥ ಸತ್ಯ ಸ್ವರೂಪಿಣಿಯನ್ನು ಕೊಂದರೆ ನನಗೆ ನರಕ ಪ್ರಾಪ್ತಿಯಾಗುವುದೆಂದು ತಿಳಿದು ಆಕೆಯ ಸತ್ಯಕ್ಕೆ ಶರಣಾಗಿ ದೇವರಲ್ಲಿಗೆ ಹೋದರು. ಈಗ ಅವಳಿಗಿಂತ ದೊಡ್ಡ ಗುಣನಿಧಿಯಾದ ನೀನು ನನ್ನ ಮುಂದೆ ಇರುವುದು ನಮ್ಮಪ್ಪ ಮಾಡಿದ ಪುಣ್ಯದ ಫಲ. ಸೋದರಿ, ನಾನು ನಿನ್ನನ್ನು ಕೊಲ್ಲುವುದಿಲ್ಲ. ನಿನ್ನ ಬಳಗದ ಯಾವ ಗೋವುಗಳ ಮೇಲೂ ಎರಗುವುದಿಲ್ಲ. ನಾನೂ ನನ್ನ ತಂದೆಯಂತೆ ದೇಹತ್ಯಾಗ, ಅನ್ನತ್ಯಾಗ ಮಾಡುತ್ತೇನೆ! ಇದರಿಂದ ನನಗೂ ತಂದೆಗೆ ಪ್ರಾಪ್ತವಾದ ಸ್ವರ್ಗ ದೊರೆಯುತ್ತದೆ. ಅಲ್ಲಿ ನನ್ನಪ್ಪ–ಅವ್ವನನ್ನು ಕಾಣುವ ಬಯಕೆ, ಮಾತನಾಡುವ ಬಯಕೆ, ತಾಯ ಕೊರಳಿಗೆ ಒರಗಿ ಮಲಗುವ ಬಯಕೆ...'

ಏನನ್ನೋ ಸಾಧಿಸಿದ ತೃಪ್ತಿಯ ಹೆಜ್ಜೆ ಮುಂದಿಡುತ್ತಾ ಹುಲಿ ಪರ್ವತದ ತುದಿಗೆ ಹೋಗಲು ಹೆಜ್ಜೆ ಎತ್ತಿಡುತ್ತದೆ.

ಪುಣ್ಯಕೋಟಿಯ ಮಗಳು ಸಾಯಲು ದಾರಿಬಿಡದಂತೆ ಅಡ್ಡನಿಂತು ತಡೆಯುತ್ತಾಳೆ.



'ಅಣ್ಣಾ... ಸಾಯದಿರು' ಕಣ್ಣೀರಿಡುತ್ತಾಳೆ. 'ಸೋದರನೇ, ದೈವರೂಪಿ ನಾನಲ್ಲ, ನನ್ನ ತಾಯಿ ಪುಣ್ಯಕೋಟಿಯೂ ಅಲ್ಲ. ನಿಜ ದೈವ ನೀನು, ನಿನ್ನ ತಂದೆ ಅರ್ಬುದನೆಂಬ ಸಂತ! ನನಗೆ ಮಾತೃಭಿಕ್ಷೆ ನೀಡಿದ ಸಂತ, ನೀನೋ ನನಗೆ ಜೀವ ಭಿಕ್ಷೆ ನೀಡುತ್ತಿರುವ ಸಂತ. ಇಂತಹ ವಂಶಸ್ಥನಾದ ನಿನ್ನ ದೇಹತ್ಯಾಗಕ್ಕೆ ನನ್ನ ಸಹಮತವಿಲ್ಲ. ಅಂದು ತಾಯಿ ಪುಣ್ಯಕೋಟಿ ಮಾಡಿದ ತಪ್ಪನ್ನೇ ಮತ್ತೆ ಮಾಡಲಾರೆ. ಅವಳಂತೆ ಕೊರಗಿ ಸಾಯಲಾರೆ.'

ಇಬ್ಬರ ಬೇಕು–ಬೇಡಗಳು ತಾರಕಕ್ಕೇರುತ್ತವೆ. ಹುಲಿಯು ಚಂಗನೆ ನೆಗೆದು ಪುಣ್ಯಕೋಟಿಯ ಮಗಳಿಂದ ತಪ್ಪಿಸಿಕೊಂಡು ಎತ್ತರದ ಬಂಡೆ ಹತ್ತಿ ಬೆಟ್ಟದ ಮೇಲೆ ನಿಲ್ಲುತ್ತದೆ. 'ಸ್ವರ್ಗವಾಸಿ ನನ್ನ ತಂದೆಯೇ... ನಿನ್ನಲ್ಲಿಗೆ ಬರುತ್ತಿದ್ದೇನೆ. ಕರೆದುಕೋ. ಪರರ ಒಳಿತಿಗೆ ತನ್ನ ಪ್ರಾಣ ನೀಡಬಂದ ದೈವಸ್ವರೂಪಿ ಗೋವನ್ನು ನಾನು ಕೊಂದಿಲ್ಲ. ದೇವರೇ, ನನಗೆ ಸ್ವರ್ಗ ದಯಪಾಲಿಸು.'

ಹುಲಿ ಹಾರಿ ನೆಗೆಯಲು ಸಿದ್ಧವೆನ್ನುವಂತೆ ಹೆಜ್ಜೆ ಹಿಂದಿಡುತ್ತದೆ.

ಪುಣ್ಯಕೋಟಿಯ ಮಗಳೂ ಹುಲಿಯೆಡೆಗೆ ಬರುತ್ತಾಳೆ.

ಮೋಡದ ಹೆಪ್ಪುಗಳ ಸಮೂಹ ಹುಲಿಯ ಮುಂದಿನ ನಿರ್ವಾತದಲ್ಲಿ ನಿಧಾನವಾಗಿ ಇಳಿದು ಆ ಹೆಪ್ಪುಗಳು ಕರಗಲಿಡುತ್ತವೆ. ಇದೇನು ಮಾಯೆ? ಹುಲಿಗೆ ಅಚ್ಚರಿ! ಹುಲಿ ಕಣ್ಣುಗಳನ್ನು ಮುಚ್ಚಿ ತೆಗೆದು ಮಾಡುತ್ತದೆ.

'ಅಪ್ಪಾ...'

ಅರ್ಬುದ ದೇಹರೂಪ ಪಡೆದು ನಿರ್ವಾತದಿಂತ ತನ್ನ ಮಗನ ಬಳಿಗೆ ನೆಗೆದು ಬರುತ್ತಾನೆ. ಬಹುದಿನಗಳಿಂದ ಇದ್ದ ಮಗನ ಕೊರಗು ನೀಗಿಸುವವನಂತೆ ಬಿಗಿದಪ್ಪುತ್ತಾನೆ. ಕೊರಳಿಗೆ ಕೊರಳು ಕೊಟ್ಟು ಮುದ್ದಿಸುತ್ತಾನೆ, ಇಬ್ಬರ ಕಣ್ಣು–ಕೊರಳು–ಕರುಳು ತುಂಬಿ ಬರುತ್ತವೆ. ಸಾವರಿಸಿಕೊಂಡ ಅರ್ಬುದನ ಮಗ ಸಂಕಟದಲ್ಲಿ ನುಡಿಯುತ್ತಾನೆ. 'ನನ್ನ ನೋಡಲು ಸ್ವರ್ಗದಿಂದ ಇಳಿದು ಬಂದೆಯಾ...? ಇಷ್ಟು ದಿನ ಯಾಕೆ ಬರಲಿಲ್ಲ, ನೀನು ತೀರಿದ ಅರೆಗಳಿಗೆಗೆ ನನ್ನ ಕಿರಿಯ ತಮ್ಮಂದಿರಿಬ್ಬರೂ ನಿನ್ನ ಹಿಂದೆಯೇ ಬಂದರು. ನಿನ್ನನ್ನೇ ಹಿಂಬಾಲಿಸಿ ನಡೆಯುವಷ್ಟು ಹಸಿವು ಅವರನ್ನು ಹಿಂಡಿತ್ತು, ಮತ್ತೊಬ್ಬ ನನ್ನ ಕಣ್ಣಮುಂದೆಯೇ ತೋಳದ ಬಾಯಿಗೆ ಮೊಲದ ಮರಿಯಾದ, ಕಿರಿಯರ ಸಾವನ್ನು ಕಂಡ ನಾನು ಅದೇಗೆ ಉಳಿದೆನೋ... ಬೆಳೆದೆನೋ... ಅದು ಯಾವ ಘನಕ್ಕಾಗಿ ಬದುಕಿರುವೆನೋ, ನನ್ನದೂ ಒಂದು ಬಾಳೇ...' ಅಳುತ್ತಾನೆ.

ಅರ್ಬುದ ಗದ್ಗದಿಸುತ್ತಾ... 'ನಾನು ಸ್ವರ್ಗದಿಂದ ಇಳಿದು ಬರಲಿಲ್ಲವಪ್ಪಾ. ಆತ್ಮಹತ್ಯೆಯಂಥ ಘೋರ ಪಾಪವನ್ನಾಚರಿಸಿದ್ದರಿಂದ ನನಗೆ ಸ್ವರ್ಗ–ನರಕಗಳಿಲ್ಲ. ನಾ ಬಿದ್ದ ಜಾಗದಲ್ಲಿಯೇ ಅಲೆಯುತ್ತಿದ್ದೆ, ನಿನ್ನ ಈ ತಪ್ಪು ನಿರ್ಧಾರವ ಕಂಡು ಬಂದೆ. ಬಾ ಕಂದ' ಎಂದು ಮತ್ತೆ ಅಪ್ಪುತ್ತಾನೆ.

ಇದಕಂಡ ಪುಣ್ಯಕೋಟಿಯ ಮಗಳಿಗೆ ತಾಯಿಯ ನೆನಪು ಉಕ್ಕಿ ಆಕೆ ಚಡಪಡಿಸುತ್ತಾ,